REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 | ಸಂಚಿಕೆ : 10 | ಜೂನ್ 14, 2023 | ಬುಧವಾರ | ಪುಟಗಳು : 8 | ಬೆಲೆ : 2/-

## ಮಹಾಮಂಡಳದ ಸತತ ಪ್ರಯತ್ನದಿಂದ ಏಕಕಾಲೀಕ ಸಾಲ ತೀರುವಳಿ ಮತ್ತು ರೈಟ್ ಆಫ್ ಹಾಗೂ ಹೊಸ ಶಾಖೆ ಪ್ರಾರಂಭಕ್ಕೆ ಆಯಾ ಬ್ಯಾಂಕಿನ ಆಡಳಿತ ಮಂಡಳಿಗಳಿಗೆ ಪೂರ್ಣ ಅಧಿಕಾರ - ಆರ್‌ಬಿಐ



ಮಹಾಮಂಡಳದ ಅಧ್ಯಕ್ಷರು ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋಧ್ಯಮ ಸಚಿವರಾದ ಸನ್ಮಾನ್ಯ ಶ್ರೀ ಎಚ್. ಕೆ. ಪಾಟೀಲರು ಆರ್‌ಬಿಐ ಸ್ಥಾಯಿ ಸಮಿತಿ ಹಾಗೂ ಟ್ಯಾಫಕಬ್ ಸದಸ್ಯರಾಗಿರುತ್ತಾರೆ. ಮಾನ್ಯ ಶ್ರೀ ಎಚ್.ಕೆ. ಪಾಟೀಲರು ಈ ಎರಡು ಸಭೆಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಾ ಪಟ್ಟಣ ಸಹಕಾರಿ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸವಿಸ್ತಾರವಾಗಿ ಮಂಡಿಸಿದ ಪರಿಣಾಮವಾಗಿ ಈ ಕೆಳಗಿನ ಎರಡು ಪ್ರಮುಖ ಸಮಸ್ಯೆಗಳಿಗೆ ಆರ್‌ಬಿಐ ಪರಿಹಾರ ನೀಡಿ ದಿನಾಂಕ : 08.06.2023 ರಂದು ಸುತ್ತೋಲೆ ಹೊರಡಿಸಿರುತ್ತದೆ.

**1. ಸುಸ್ತಿ ಸಾಲಗಳ ಏಕಕಾಲೀಕ ತೀರುವಳಿ ಮತ್ತು ರೈಟ್ ಆಫ್:** ಸುಸ್ತಿ ಸಾಲಗಳ ಏಕಕಾಲೀಕ ತೀರುವಳಿ ಮತ್ತು ರೈಟ್ ಆಫ್‌ಗಾಗಿ ಮಾರ್ಗಸೂಚಿಯನ್ನು ಜಾರಿಗೊಳಿಸಲು ಭಾರತೀಯ ರಿಜರ್ವ್ ಬ್ಯಾಂಕು 2003ನೇ ಇಸವಿಯಲ್ಲಿ ರಾಜ್ಯ ಸರ್ಕಾರವನ್ನು ಕೇಳಿಕೊಂಡಿತ್ತು. ಮಹಾಮಂಡಳದ ಸತತ ಪ್ರಯತ್ನದ ಹೊರತಾಗಿಯೂ ರಾಜ್ಯ ಸರ್ಕಾರ ಈ ಬಗ್ಗೆ ಯಾವುದೇ ಮಾರ್ಗಸೂಚಿಯನ್ನು ಜಾರಿಗೊಳಿಸದಿದ್ದುದರಿಂದ ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಸುಸ್ತಿಸಾಲ ವಸೂಲಾತಿಯಲ್ಲಿ ಬಹಳ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸುತ್ತಿದ್ದವು. ಇತ್ತೀಚಿನ ದಿನಗಳಲ್ಲಿ ಮಹಾಮಂಡಳ ರಿಜರ್ವ್ ಬ್ಯಾಂಕಿನ ಎಲ್ಲಾ ವೇದಿಕೆಗಳಲ್ಲಿ ಈ ಬಗ್ಗೆ ಪ್ರಸ್ತಾಪಿಸುತ್ತಿದ್ದುದಲ್ಲದೇ, ನಮ್ಮ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರು ರಿಜರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್‌ರವರನ್ನು ಖುದ್ದಾಗಿ ಭೇಟಿ ಮಾಡಿ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಮನವರಿಕೆ ಮಾಡಿಸಿದ್ದರು. ಈ ಎಲ್ಲ ಪ್ರಯತ್ನಗಳ ಪರಿಣಾಮವಾಗಿ ಭಾರತೀಯ ರಿಜರ್ವ್ ಬ್ಯಾಂಕು ದಿನಾಂಕ : ಜೂನ್ 08, 2023ರಂದು ಒಂದು ಸುತ್ತೋಲೆಯನ್ನು ಹೊರಡಿಸಿ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗೆ ಸುಸ್ತಿಸಾಲಗಳ ವಸೂಲಾತಿಗಾಗಿ ಏಕಕಾಲೀಕ ಸಾಲ ತೀರುವಳಿ ಮತ್ತು ರೈಟ್‌ಆಫ್ ಆಯಾ ಬ್ಯಾಂಕಿನ ನೀತಿಯನ್ನು ನಿರ್ಧರಿಸಲು ಆಡಳಿತ ಮಂಡಳಿಗೆ ಪೂರ್ಣ ಅಧಿಕಾರ ನೀಡಿದೆ.

ಇನ್ನು ಮುಂದೆ, ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಸದಸ್ಯರಿಗೆ ಸುಸ್ತಿಸಾಲದ ಏಕಕಾಲೀಕ ತೀರುವಳಿಯನ್ನು ಸಹಕಾರ ಸಂಘಗಳ ನಿಬಂಧಕರ ಮತ್ತು ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆಯದೆ ನೀಡಬಹುದಾಗಿದೆ. ಇದಲ್ಲದೆ ಸುಸ್ತಿ ಸಾಲಗಳ ತಾಂತ್ರಿಕ ವಜಾ ಮಾಡಲು ಕೂಡಾ ಬ್ಯಾಂಕುಗಳಿಗೆ ಪೂರ್ಣ ಅಧಿಕಾರ ನೀಡಲಾಗಿದೆ. ಈ ಬಗ್ಗೆ ಬ್ಯಾಂಕುಗಳು ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಮಹಾಮಂಡಳ ಪೂರ್ಣ ಮಾಹಿತಿ ಸದ್ಯದಲ್ಲೇ ನೀಡಲಿದೆ.

**2. ಬ್ಯಾಂಕಿನ ಹೊಸ ಶಾಖೆ ಪ್ರಾರಂಭ :** ಈ ಹಿಂದಿನಿಂದಲೂ ಹೊಸ ಶಾಖೆಗಳ ಪ್ರಾರಂಭಕ್ಕೆ ಆಯಾ ಬ್ಯಾಂಕುಗಳು ಪೂರ್ಣ ಪ್ರಸ್ತಾವನೆಗಳನ್ನು ತಯಾರಿಸಿ ಸ್ಥಳೀಯ ಆರ್‌ಬಿಐ ಕಛೇರಿಗೆ ಕಳುಹಿಸಿದಾಗ ವಿಳಂಬ ಹಾಗೂ ಕಾರಣ ನೀಡದೇ ಪ್ರಸ್ತಾವನೆಗಳು ವಿಲೇವಾರಿಯಾಗದೇ ಉಳಿದಿರುತ್ತವೆ. ಈ ಬಗ್ಗೆ ಮಹಾಮಂಡಳ ಮಧ್ಯೆ ಪ್ರವೇಶಿಸಿ ಟ್ಯಾಫ್‌ಕಬ್ / ಸಲಹಾ ಸಮಿತಿ ಸಭೆಗಳಲ್ಲಿ ಈ ವಿಳಂಬ ಧೋರಣೆಯನ್ನು ವಿರೋಧಿಸುತ್ತಾ ಬರುತ್ತಿತ್ತು. ನಮ್ಮ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ಸತತ ಪರಿಶ್ರಮದಿಂದ ಇನ್ನು ಮುಂದೆ ಆರ್ಥಿಕವಾಗಿ ಸದೃಢವಾದ ಪಟ್ಟಣ ಸಹಕಾರ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಇಲ್ಲದೆ ತಮ್ಮ ಕಾರ್ಯಕ್ಷೇತ್ರದಲ್ಲಿ ಹೊಸ ಶಾಖೆಗಳನ್ನು ತೆರೆಯಬಹುದಾಗಿದೆ. ದಿನಾಂಕ : 09/06/2023ರಂದು ನಮ್ಮ ಮಹಾಮಂಡಳ ಮೈಸೂರಿನಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಿ ಬೆಂಗಳೂರು ಭಾರತೀಯ ರಿಜರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಆರ್. ಗಡ ಇವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು.

ಶ್ರೀಮತಿ ಮೀನಾಕ್ಷಿ ಆರ್. ಗಡ ರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾರಂಭವನ್ನು ಉದ್ಘಾಟಿಸಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಇಂತಹ

2ನೇ ಪುಟಕ್ಕೆ...

ದಿನಾಂಕ : 09.06.2023 ರಂದು ಮೈಸೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ಉಪಾಧ್ಯಕ್ಷರು / ನಿರ್ದೇಶಕರುಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ 3

ಆರ್‌ಬಿಐ ತ್ರೈಮಾಸಿಕ ವಿತ್ತೀಯ ನೀತಿ ಪ್ರಕಟ : ದರ ಯಥಾಸ್ಥಿತಿ ಮುಂದುವರಿಕೆ 4

ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



# ಮುಂಗಾರು ನಮ್ಮ ರೈತರಿಗೆ ನವ ಚೈತನ್ಯ ತರಲಿ

ಪ್ರತಿ ವರ್ಷ ಜೂನ್ ಆರಂಭಕ್ಕೆ ಕೇರಳದ ಕರಾವಳಿಗೆ ಪ್ರವೇಶಿಸುವ ಮುಂಗಾರು ನಂತರದ ದಿನಗಳಲ್ಲಿ ನಮ್ಮ ರಾಜ್ಯವನ್ನು ಪ್ರವೇಶಿಸುತ್ತಿತ್ತು. ಆದರೆ ಈ ಬಾರಿ ಜೂನ್ ಎರಡನೇ ವಾರ ಕಳೆದರೂ ಇನ್ನು ದರ್ಶನ ಕೊಟ್ಟಿಲ್ಲದಿರುವುದು ತುಸು ಆತಂಕ ಉಂಟುಮಾಡಿತ್ತಾದರೂ, ಈಗಾಗಲೇ ಕೇರಳದಲ್ಲಿ ಮುಂಗಾರು ಆರಂಭಗೊಂಡಿರುವ ಶುಭ ಸುದ್ದಿ ಬಂದಿದೆ. ಇನ್ನೂ ಕೆಲ ದಿನಗಳಲ್ಲೇ ರಾಜ್ಯಕ್ಕೆ ಮುಂಗಾರು ಮಾರುತಗಳು ಪ್ರವೇಶಿಸಲಿವೆ, ಆತಂಕ ಬೇಡವೆಂದು ಹವಾಮಾನ ತಜ್ಞರು ತಿಳಿಸಿದ್ದಾರೆ. ತುಸು ಸಮಾಧಾನದ ವಿಷಯವೆಂದರೆ, ಮೇ ತಿಂಗಳಿನಲ್ಲಿ ಮುಂಗಾರು ಪೂರ್ವ ಉತ್ತಮವಾಗಿ ಮಳೆ ಸುರಿದಿರುವುದು.

ಸೂರ್ಯನ ಬಿರು ಬಿಸಿಲಿಗೆ ಬಸವಳಿದ ಜನ, ಜಾನುವಾರುಗಳು, ಬಿರಿದ ನೆಲ ಒಂದು ಹನಿ ಮಳೆ ಬಿದ್ದಕೂಡಲೆ ಆಗುವ ಬದಲಾವಣೆ ಅಭೂತಪೂರ್ವದ್ದು. ಎಂದೂ ನೆಲದಲ್ಲಿ ಬಿದ್ದ ಬೀಜಗಳು ಮೊಳೆತು ಚಿಗುರೊಡೆಯುತ್ತದೆ. ಒಣಗಿ ಬಾಡಿದ ಮರ, ಗಿಡಗಳು ತಲೆಯೆತ್ತಿ, ಹಚ್ಚ ಹಸುರಿನಿಂದ ಕಂಗೊಳಿಸುತ್ತವೆ. ಚಿಗುರಿದ ಗಿಡ, ಬಳ್ಳಿಗಳಲ್ಲಿ ಹೂ ಅರಳಿ, ಕಾಯಾಗಿ, ಹಣ್ಣಾಗಿ ಆಟವಾಡುವ ಮಕ್ಕಳ ಬಾಯಿ ತಣಿಸುತ್ತವೆ. ಎಲ್ಲೆಡೆ ನಾನಾ ವಿಧದ ಹಕ್ಕಿಗಳ, ಚಿಟ್ಟೆಗಳ, ದುಂಬಿಗಳ ಹಾರಾಟದಿಂದ ನೋಡುವ ಕಣ್ಣುಗಳಿಗೆ, ಪ್ರಕೃತಿ ನವ ಚೈತನ್ಯದಿಂದ ಕಂಗೊಳಿಸುತ್ತದೆ.

ನಮ್ಮಲ್ಲಿ ನೈರುತ್ಯ ಮುಂಗಾರು ಮಳೆ ಉತ್ತಮವಾಗಿ ಸುರಿದಾಗ, ಬಯಲ ಹಸಿರನ್ನು ಮಾತ್ರ ಚಿಗುರಿಸುವುದಿಲ್ಲ, ದೇಶದ, ರಾಜ್ಯದ ಆರ್ಥಿಕತೆಯನ್ನೇ ಚಿಗುರಿಸುತ್ತದೆ. ಮುಂಗಾರು ರೈತನ ಮೊಗದಲ್ಲಿ ಉತ್ಸಾಹವನ್ನು, ಆಡಳಿತಗಾರರಲ್ಲಿ ಸಮಾಧಾನ ಮೂಡಿಸುತ್ತದೆ ಮಾತ್ರವಲ್ಲ, ನಾಡಿನ ಜನರಲ್ಲಿ ನೆಮ್ಮದಿಯನ್ನೂ ಮೂಡಿಸುತ್ತದೆ. ಮುಂಗಾರು ಋತುವಿನಲ್ಲಿ ರೈತರಿಗೆ ಬಿಡುವಿಲ್ಲದ ಕೃಷಿ ಚಟುವಟಿಕೆ ಶುರುವಾಗುತ್ತದೆ.

ನಮ್ಮ ರಾಜ್ಯದಲ್ಲಿ ರೈತರು, ಮುಂಗಾರು ಬೆಳೆಗಳಾದ ಭತ್ತ, ರಾಗಿ, ಕಬ್ಬು, ದ್ವಿದಳಧಾನ್ಯ, ಎಣ್ಣೆಕಾಳು ಹಾಗೂ ಇತರೆ ಬೆಳೆಗಳನ್ನು ಬಿತ್ತನೆ ಮಾಡುವುದು ವಾಡಿಕೆ. ಇದಕ್ಕೆ ತಕ್ಕಂತೆ ನಮ್ಮ ಆಡಳಿತ ವ್ಯವಸ್ಥೆ ಕೂಡ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ರೈತರಿಗೆ ಗುಣಮಟ್ಟದ ಬೀಜ, ಅಗತ್ಯ ರಸಗೊಬ್ಬರದ ಕೊರತೆ ಆಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು ಕಳಪೆ ಬಿತ್ತನೆ ಬೀಜ, ರಸಗೊಬ್ಬರ ವಿತರಣೆಯಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ, ಕೃಷಿ ಅಧಿಕಾರಿಗಳು ರೈತರ ಜೊತೆ ಚರ್ಚಿಸಿ, ಮಧ್ಯವರ್ತಿಗಳ ಹಾವಳಿಯನ್ನು ಸಂಪೂರ್ಣ ನಿಯಂತ್ರಣ ಮಾಡಬೇಕಿದೆ.

ರೈತರಿಗೆ ಕೃಷಿ ಕೆಲಸ ಇದ್ದಾಗ ಅವರನ್ನು ಸರ್ಕಾರಿ ಕಚೇರಿಗಳಿಗೆ ಅಲೆಯುವಂತೆ ಮಾಡಬಾರದು. ಅವರಿಗೆ ಅಗತ್ಯವಿರುವ ಬೀಜ, ಗೊಬ್ಬರ, ಕೀಟನಾಶಕ ಅಗತ್ಯ ಪ್ರಮಾಣದಲ್ಲಿ ಆಯಾ ಸ್ಥಳದಲ್ಲೇ ದೊರೆಯುವಂತೆ ವ್ಯವಸ್ಥೆಯಾಗಬೇಕು ಹಾಗೂ ರೈತರಿಗೆ ಅಗತ್ಯ ಕೃಷಿ ಪರಿಕರಗಳನ್ನು ಸಕಾಲದಲ್ಲಿ ದೊರೆಯುವಂತೆ ನೋಡಿಕೊಳ್ಳಬೇಕಿದೆ.

ಸಹಕಾರ ಸಂಘ/ಸಂಸ್ಥೆಗಳು ರೈತರಿಗೆ ಸಕಾಲದಲ್ಲಿ ಅಗತ್ಯ ಆರ್ಥಿಕ ನೆರವನ್ನೂ ನೀಡಬೇಕಿದೆ. ಬರಲಿರುವ ಮುಂಗಾರು ನಮ್ಮ ರೈತರಿಗೆ, ಸಹಕಾರಿಗಳಿಗೆ, ಸಮಸ್ತ ಜನತೆಗೆ ನವ ಚೈತನ್ಯ ತರಲಿ ಎಂದು ಹಾರೈಸುತ್ತೇನೆ.

▸▸ ಎಚ್.ಕೆ. ಪಾಟೀಲ್

...1ನೇ ಪುಟದಿಂದ

ಕಷ್ಟದ ಸಂದರ್ಭದಲ್ಲಿಯೇ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಮಹಾಮಂಡಳವೆಂದರೆ ಅದು ನಮ್ಮ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವೆಂದು ಸಂತೋಷದಿಂದ ಒಪ್ಪಿ ಮಹಾಮಂಡಳವನ್ನು ಅಭಿನಂದಿಸಿದರು. ಈ ಎರಡು ಪ್ರಮುಖ ಸುತ್ತೋಲೆ ಹೊರಡಿಸಬೇಕಾದರೆ ಮಾನ್ಯ ಶ್ರೀ ಎಚ್.ಕೆ. ಪಾಟೀಲರ ಮತ್ತು ಮಹಾಮಂಡಳದ ಪ್ರಯತ್ನವೆಂದು ಶ್ಲಾಘಿಸಿದರು.

## ಮಹಾಮಂಡಳದ ಪ್ರಯತ್ನದಿಂದ ಆದ್ಯತಾ ವಲಯದ ಸಾಲಕ್ಕೆ ಸಮಯದ ವಿಸ್ತರಣೆ – ಆರ್‌ಬಿಐ

ದಿನಾಂಕ : 04.09.2020ರ ಆರ್‌ಬಿಐ ಸುತ್ತೋಲೆಯ ಅನ್ವಯ ಆಯಾ ಬ್ಯಾಂಕುಗಳು ಆದ್ಯತಾ ವಲಯ ಸಾಲ (PSL) ಗುರಿಗಳು / ಉಪಗುರಿಗಳು ಮತ್ತು ಪಿಎಸ್‌ಎಲ್ ಗುರಿಗಳ ಸಾಧನೆಯಲ್ಲಿನ ಕೊರತೆಯ ವಿರುದ್ಧ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಭಾರತೀಯ ರಿಜರ್ವ್ ಬ್ಯಾಂಕು ದಿನಾಂಕ : 08.06.2023 ರಂದು ಸಮಯವನ್ನು ವಿಸ್ತರಿಸಿ ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆಯಿಂದ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಎರಡು ವರ್ಷ ಅವಧಿಗೆ ಆದ್ಯತಾ ಮತ್ತು ದುರ್ಬಲ ವರ್ಗ ಸಾಲಗಳಿಗೆ ರಿಯಾಯಿತಿ ಸಿಕ್ಕಂತಾಗಿದೆ. ಇದರಿಂದ ಪಟ್ಟಣ ಸಹಕಾರ ಬ್ಯಾಂಕುಗಳು ನಿಧಿ ಹೂಡಿಕೆಗೆ ಅನುಕೂಲಕರವಾಗಿರುತ್ತದೆ. ಎರಡು ವರ್ಷಗಳ ಸಮಯಾವಕಾಶದಿಂದ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಯೋಜನೆ ರೂಪಿಸಲು ಅನುಕೂಲಕರವಾಗಿರುತ್ತದೆ. ಆದರೂ ಸಹ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆದ್ಯತಾ / ದುರ್ಬಲ ವರ್ಗ ಸಾಲಗಳಿಗೆ ಮಾನದಂಡಗಳು ನಿಗದಿಪಡಿಸುವುದು ಉತ್ತಮ ಬೆಳವಣಿಗೆಯಾಗುವುದಿಲ್ಲ. ಈ ಬಗ್ಗೆ ಮಹಾಮಂಡಳ ಸಹ ಪೂರ್ಣ ರಿಯಾಯಿತಿ ಸಿಗುವವರೆಗೆ ಪ್ರಯತ್ನಿಸಲಾಗುತ್ತದೆ. ಸದರಿ ಸುತ್ತೋಲೆಯ ಪೂರ್ಣ ವಿವರಗಳನ್ನು ಈಗಾಗಲೇ ದಿನಾಂಕ : 09.06.2023ರಂದು ಈ ಬಗ್ಗೆ ಸವಿಸ್ತಾರವಾಗಿ ವಿವರಿಸಿ ನಮ್ಮ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮಹಾಮಂಡಳದಿಂದ ಸುತ್ತೋಲೆ ಈಗಾಗಲೇ ಕಳುಹಿಸಿಕೊಡಲಾಗಿದೆ.

# ದಿನಾಂಕ : 09.06.2023 ರಂದು ಮೈಸೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ಉಪಾಧ್ಯಕ್ಷರು / ನಿರ್ದೇಶಕರುಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ

**ಮೈಸೂರು :** ದಿನಾಂಕ : 09.06.2023 ರಂದು ಮೈಸೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು / ಆಡಳಿತ ಮಂಡಳಿ ಸದಸ್ಯರಿಗೆ ಏರ್ಪಡಿಸಿದ್ದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಭಾರತೀಯ ರಿಜರ್ವ್ ಬ್ಯಾಂಕಿನ (ಯುಬಿಡಿ) ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಆರ್. ಗಡರವರು ಉದ್ಘಾಟಿಸಿ, ಮಾತನಾಡಿದರು.

ಮಹಾಮಂಡಳದ ನಿರ್ದೇಶಕರಾದ ಶ್ರೀ ಹೆಚ್. ವಾಸು ರವರು ಮಾತನಾಡಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ನಮ್ಮ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರಿಗೆ & ಅಧಿಕಾರಿಗಳಿಗೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುತ್ತದೆ. ಪ್ರತಿ ತಿಂಗಳಿಗೊಮ್ಮೆ ತರಬೇತಿ ವಿಚಾರ ಸಂಕಿರಣ ಕಾರ್ಯಾಗಾರಗಳು, ಹಾಗೆಯೇ ಎಲ್ಲರ ಬುದ್ಧಿಮತ್ತೆ ಹೆಚ್ಚಿಸುವ ಕಾರ್ಯಕ್ರಮಗಳನ್ನು ನಮ್ಮ ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರ ನಿರ್ದೇಶನದ ಅನ್ವಯ ನಮ್ಮ ಮಹಾಮಂಡಳ ಆಯೋಜಿಸುತ್ತಾ ಬಂದಿದೆ. ಇಂದು ಮೈಸೂರಿನಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ಒಂದು ಮೈಲುಗಲ್ಲಾಗಬೇಕೆಂದು ಆಶಿಸುತ್ತೇನೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಇಂತಹ ವಿಚಾರ ಸಂಕಿರಣಗಳು ಅನುಕೂಲವಾಗುತ್ತವೆ. ಮಹಾಮಂಡಳದ ನಿರ್ದೇಶಕರಾದ ಶ್ರೀ ನಿರಂಜನ್ ಟಿ.ಎಸ್. ರವರು ಮಾತನಾಡಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನ ನಿಯಂತ್ರಣಕ್ಕೊಳಪಟ್ಟು ಟಿ.ಡಿ.ಎಸ್ ಮತ್ತು ಆದಾಯ ತೆರಿಗೆ ವಿನಾಯಿತಿಗಳಿಲ್ಲದೇ ಕಾರ್ಯನಿರ್ವಹಿಸುತ್ತಿರುವುದರಿಂದ ಹೆಚ್ಚಿನ ಪ್ರಗತಿ ಹೊಂದಲು ಸಾಧ್ಯವಾಗುತ್ತಿಲ್ಲ. ಆದರೆ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರ ಸಂಘಗಳಿಗೆ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಯಾವುದೇ ನಿಯಂತ್ರಣವಿಲ್ಲದೇ ಹಾಗೂ ಟಿ.ಡಿ.ಎಸ್. ಮತ್ತು ಆದಾಯ ತೆರಿಗೆ ವಿನಾಯಿತಿ ಇದ್ದು, ಸಾಲಗಳ ಮೇಲೆ ನಿರ್ಬಂಧಗಳು ಇಲ್ಲದಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಸಹಕಾರ ಸಂಘಗಳು ಪ್ರಗತಿಯನ್ನು ಸಾಧಿಸುತ್ತಿವೆ. ಈ ನಿಟ್ಟಿನಲ್ಲಿ ಭಾರತೀಯ ರಿಜರ್ವ್



ಬ್ಯಾಂಕು ಮತ್ತು ಕೇಂದ್ರ / ರಾಜ್ಯ ಸರ್ಕಾರಗಳು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಿಶೇಷ ಗಮನಹರಿಸಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಡಿಲಿಕೆ ನೀಡುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕ ಮಂಡಳಿ ಪಾತ್ರ ಕುರಿತು ಆರ್‌ಬಿಐನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಆರ್. ಗಡರವರು ಉಪನ್ಯಾಸ ನೀಡಿದರು. ಇತ್ತೀಚಿನ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಹಾಗೂ ಸಹಕಾರ ಸಂಘಗಳ ಕಾಯ್ದೆ ನಿಯಮಗಳ ಪ್ರಮುಖ ಮುಖ್ಯಾಂಶಗಳ ಬಗ್ಗೆ ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್‌ರವರು, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಬ್ಯಾಂಕಿಂಗೇತರ ಆದಾಯಗಳನ್ನು ಹೆಚ್ಚಿಸುವ ಕ್ರಮಗಳು ಕುರಿತು ಆನಂದರಥಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಸಂಜಯ ಇಂಚಲ್ ರವರು, ಡಿಜಿಟಲ್ ಬ್ಯಾಂಕಿಂಗ್ ಮತ್ತು ಬ್ಯಾಂಕಿಂಗ್ ತಂತ್ರಾಂಶ ಕುರಿತು ಅಮೆಜಾನ್ ವೆಬ್ ಸರ್ವೀಸ್ ಇಂಡಿಯ ಪ್ರೈವೇಟ್ ಲಿ.,ನ ವ್ಯವಸ್ಥಾಪಕರಾದ ಶ್ರೀ ರಿತವಿಕ್ ರಾವ್‌ರವರು ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ಈ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎಸ್. ಕೇರೂರೆಯವರು ಸ್ವಾಗತಿಸಿದರು. ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಪಿ. ವೀರಮ್ಮ ವಂದನಾರ್ಪಣೆ ಸಲ್ಲಿಸಿದರು. ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ ಭಾಗವಹಿಸಿದ್ದರು. ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಂಡರು.



# ಆರ್‌ಬಿಐ ತ್ರೈಮಾಸಿಕ ವಿತ್ತೀಯ ನೀತಿ ಪ್ರಕಟ : ದರ ಯಥಾಸ್ಥಿತಿ ಮುಂದುವರಿಕೆ

**ಮುಂಬೈ :** ರಿಸರ್ವ್ ಬ್ಯಾಂಕ್ ಹಣಕಾಸು ನೀತಿ ಸಮಿತಿ ಇಂದು ತನ್ನ ತ್ರೈಮಾಸಿಕ ವಿತ್ತೀಯ ನೀತಿ ಪ್ರಕಟಿಸಿದ್ದು, ರೆಪೊ ದರವನ್ನು ಶೇಕಡಾ 6.5ರಷ್ಟು ಯಥಾಸ್ಥಿತಿ ಮುಂದುವರಿಸಲು ನಿರ್ಧರಿಸಿದೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಪತ್ರಿಕಾಗೋಷ್ಠಿಯಲ್ಲಿ ತ್ರೈಮಾಸಿಕ ವಿತ್ತೀಯ ನೀತಿಯನ್ನು ಪ್ರಕಟಿಸಿದರು. 2023–24ರ ಆರ್ಥಿಕ ವರ್ಷಕ್ಕೆ, ಎರಡನೇ ದ್ವೈಮಾಸಿಕ ಹಣಕಾಸು ನೀತಿ ಸಭೆಯು ಮೂರು ದಿನಗಳ ಅವಧಿಯ ನಂತರ ಮುಕ್ತಾಯವಾಯಿತು.

ಸಭೆಯಲ್ಲಿ ವಿತ್ತೀಯ ನೀತಿಯಲ್ಲಿ ರೆಪೊ ದರವನ್ನು ಶೇಕಡಾ 6.5ರಷ್ಟು ಮುಂದುವರಿಸಲು ನಿರ್ಧರಿಸಲಾಯಿತು. ಆರ್‌ಬಿಐ ಪಾಲಿಸಿ ರೆಪೊ ದರವನ್ನು ಶೇಕಡಾ 6.5 ರಲ್ಲಿ ಇರಿಸುತ್ತದೆ ಎಂದು ಮಾರುಕಟ್ಟೆ ನಿರೀಕ್ಷಿಸಿತ್ತು. ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ ಇಳಿಕೆ ಮತ್ತು ಭವಿಷ್ಯದ ಇಳಿಕೆಯ ಸಾಧ್ಯತೆಯು ಹಿಂದಿನ ನೀತಿ ದರದ ಪರಿಣಾಮಕಾರಿತ್ವವನ್ನು ಪ್ರದರ್ಶಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಕಳೆದ ಏಪ್ರಿಲ್ 6 ರಂದು ನಡೆದ ಹೊಸ ಹಣಕಾಸು ವರ್ಷ 2023–24ಗಾಗಿ ತನ್ನ ಮೊದಲ ದ್ವೈಮಾಸಿಕ ನೀತಿ ಸಭೆಯಲ್ಲಿ MPC ರೆಪೊ ದರವನ್ನು ಶೇಕಡಾ 6.5ರಷ್ಟು ಉಳಿಸಲಾಗಿತ್ತು. ಕಳೆದ ಮೇ ತಿಂಗಳಿನಿಂದ ರೆಪೊ ದರವನ್ನು ಈಗಾಗಲೇ ಒಟ್ಟು 250 ಮೂಲ ಅಂಶಗಳನ್ನು ಹಣದುಬ್ಬರವನ್ನು ತಗ್ಗಿಸುವ ಪ್ರಯತ್ನದಲ್ಲಿ ಹೆಚ್ಚಿಸಲಾಗಿದೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರ ಪ್ರಕಾರ ಕೇಂದ್ರೀಯ ಬ್ಯಾಂಕ್ ಸ್ಥಿರತೆಯನ್ನು ಆದ್ಯತೆಯಾಗಿ ಇರಿಸಿದೆ. ದೇಶೀಯ ಆರ್ಥಿಕತೆಯ ಮೂಲಭೂತ ಅಂಶಗಳು ಸುಧಾರಿಸುತ್ತಿವೆ. ಪ್ರಪಂಚದಾದ್ಯಂತ ನೀತಿಯನ್ನು ಸಾಮಾನ್ಯಗೊಳಿಸುವ ವಿಷಯದಲ್ಲಿ ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಬೇಕಾಗಿದೆ ಎಂದು ಅವರು ಹೇಳಿದರು.

ದೇಶದ ಆರ್ಥಿಕತೆ ಮತ್ತು ಹಣಕಾಸು ವಲಯವು ಚೇತರಿಸಿಕೊಳ್ಳುವ ಅಂಶ ನೋಡಿದರೆ ತೃಪ್ತಿಯಾಗುತ್ತದೆ ಎಂದರು. ಮುಖ್ಯ ಹಣದುಬ್ಬರವು ಗುರಿ ಶೇಕಡಾ 4ಕ್ಕಿಂತ ಹೆಚ್ಚಿದೆ. ವರ್ಷದ ಉಳಿದ ಅವಧಿಯಲ್ಲಿ ಹೆಚ್ಚಿನ ಮಟ್ಟದಲ್ಲಿ ಉಳಿಯುವ ನಿರೀಕ್ಷೆಯಿದೆ. ಆರ್ಥಿಕ ಬೆಳವಣಿಗೆ ಸಮಾಧಾನಕರವಾಗಿದೆ ಎಂದರು.




**ರೆಪೊ ದರ :** ಬ್ಯಾಂಕುಗಳಲ್ಲಿ ಹಣದ ಕೊರತೆಯಾದರೆ ಅಥವಾ ಹಣದ ಅವಶ್ಯಕತೆಯಿದ್ದರೆ ಆರ್‌ಬಿಐ ಬ್ಯಾಂಕುಗಳಿಗೆ ಕೊಡುವ ಸಾಲದ ಹಣದ ಮೇಲೆ ವಿಧಿಸುವ ನಿಶ್ಚಿತ ಬಡ್ಡಿ ದರ ರೆಪೊ ದರವಾಗಿದೆ. ಹಣದುಬ್ಬರವನ್ನು ನಿಯಂತ್ರಿಸಲು ವಿತ್ತೀಯ ಅಧಿಕಾರಿಗಳು ರೆಪೊ ದರವನ್ನು ಬಳಸುತ್ತಾರೆ.

ಹಣದುಬ್ಬರದ ಸಂದರ್ಭದಲ್ಲಿ, ಕೇಂದ್ರ ಬ್ಯಾಂಕು ಆರ್‌ಬಿಐ ರೆಪೊ ದರವನ್ನು ಹೆಚ್ಚಿಸುತ್ತವೆ, ಸಾಧ್ಯವಾದಷ್ಟು ಬ್ಯಾಂಕುಗಳು ಆರ್‌ಬಿಐಯಿಂದ ಸಾಲ ಪಡೆಯುವುದನ್ನು ತಡೆಯುತ್ತದೆ. ಇದು ಅಂತಿಮವಾಗಿ ಆರ್ಥಿಕತೆಯಲ್ಲಿ ಹಣ ಪೂರೈಕೆಯನ್ನು ಕಡಿಮೆ ಮಾಡಿ ಹಣದುಬ್ಬರ ನಿಯಂತ್ರಿಸಲು ಸಹಾಯ ಮಾಡುತ್ತದೆ.

**ರಿವರ್ಸ್ ರೆಪೊ ದರ :** ಇದಕ್ಕೆ ಪ್ರತಿಯಾಗಿ ಆರ್‌ಬಿಐ ಅಲ್ಪಾವಧಿಗೆ ಬ್ಯಾಂಕುಗಳಿಂದ ಹಣವನ್ನು ಸಾಲ ಪಡೆದು ಆ ಹಣದ ಮೇಲೆ ನೀಡುವ ಬಡ್ಡಿದರವನ್ನು ರಿವರ್ಸ್ ರೆಪೊ ದರ ಎಂದು ಕರೆಯುತ್ತಾರೆ.

# ಗ್ರಾಹಕರ ಆಸ್ತಿ ದಾಖಲೆ ಕಳೆದುಹೋದರೆ ಬ್ಯಾಂಕುಗಳೇ ಹೊಣೆ

**ಮುಂಬೈ :** ಬ್ಯಾಂಕ್ ಅಥವಾ ಗೃಹ ನಿರ್ಮಾಣಕ್ಕೆ ಸಾಲ ಪಡೆಯುವ ವೇಳೆ ಗ್ರಾಹಕರು ನೀಡಿದ ಆಸ್ತಿಯ ದಾಖಲೆಗಳನ್ನು ಹಣಕಾಸು ಸಂಸ್ಥೆಗಳೇನಾದರೂ ಕಳೆದು ಹಾಕಿದರೆ, ಆಯಾ ಸಂಸ್ಥೆಗಳೇ ಹೊಣೆ ಹೊರಬೇಕು. ಜತೆಗೆ ಗ್ರಾಹಕರಿಗೆ ಸೂಕ್ತ ರೀತಿಯಲ್ಲಿ ನಗದು ಪರಿಹಾರ ನೀಡಬೇಕು ಎಂದು ಆರ್‌ಬಿಐ 2022ರ ಮೇನಲ್ಲಿ ರಚಿಸಿದ್ದ ಬಿ.ಪಿ.ಕಾನೂನಗೋ ನೇತೃತ್ವದ ಆರು ಸದಸ್ಯರ ಸಮಿತಿ ಶಿಫಾರಸ್ಸು ಮಾಡಿದೆ.

ಜೂ.5ರಂದೇ ಸಮಿತಿಯ ವರದಿ ಬಿಡುಗಡೆಯಾಗಿದೆ. ಸಾಮಾನ್ಯವಾಗಿ ಬ್ಯಾಂಕುಗಳು, ಗೃಹ ಸಾಲ ನೀಡುವ ಸಂಸ್ಥೆಗಳು ಸಾಲದ ಅವಧಿ ಮುಕ್ತಾಯದವರೆಗೆ ಆಸ್ತಿಯ ಮೂಲ ದಾಖಲೆಗಳನ್ನು ತಮ್ಮ ವಶದಲ್ಲಿಯೇ ಇರಿಸಿಕೊಳ್ಳುತ್ತವೆ. ಸಾಲ ನೀಡುವ ಸಂಸ್ಥೆಗಳು ಗ್ರಾಹಕರು ನೀಡುವ ಆಸ್ತಿಯ ದಾಖಲೆಗಳನ್ನು ಜಾಗರೂಕತೆಯಿಂದ ನಿರ್ವಹಿಸಿ, ಅವುಗಳನ್ನು ಕಾಪಾಡಿಕೊಳ್ಳಬೇಕು ಎಂದು ಸಮಿತಿ ಸಲಹೆ ನೀಡಿದೆ. ಕೆಲವು ಬ್ಯಾಂಕುಗಳು ಇಂಥ ದಾಖಲೆಗಳನ್ನು ತಮ್ಮ ಶಾಖೆಗಳಲ್ಲಿ ಅಥವಾ ಪ್ರಧಾನ ಕಚೇರಿಗಳಲ್ಲಿ ಇರಿಸಿಕೊಳ್ಳುತ್ತವೆ.

ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಡಿಜಿ ಲಾಕರ್‌ಗಳಲ್ಲಿ ಇರಿಸಿಕೊಳ್ಳುವುದು ಸೂಕ್ತವೆಂದೂ ಸಮಿತಿ ಅಭಿಪ್ರಾಯಪಟ್ಟಿದೆ. ಇದರಿಂದಾಗಿ ದಾಖಲೆಗಳು ಕಳವಾದರೂ, ಅದನ್ನು ಸುರಕ್ಷಿತವಾಗಿ ಮತ್ತೊಮ್ಮೆ ಪಡೆದುಕೊಳ್ಳಲು ಸಾಧ್ಯವಾಗಲಿದೆ ಎಂದಿದೆ. ಇದಲ್ಲದೆ, ಸಾಲ ಮುಕ್ತಾಯವಾದ ಬಳಿಕ ನಿಗದಿತ ಕಾಲಮಿತಿಯಲ್ಲಿ ಗ್ರಾಹಕರಿಗೆ ಆಸ್ತಿಯ ದಾಖಲೆಗಳನ್ನು ಆಯಾ ಸಂಸ್ಥೆಗಳು ನೀಡುವಂತೆ ಮಾಡುವುದು ಆರ್‌ಬಿಐ ಹೊಣೆಗಾರಿಕೆಯಾಗಿದೆ ಎಂದು ಸಮಿತಿ ಹೇಳಿದೆ.

## ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವಿಶ್ವನಾಥ ಬಿ. ಕುಲಕರ್ಣಿರವರ ವಯೋನಿವೃತ್ತಿ – ಬೀಳ್ಕೊಡುಗೆ ಸಮಾರಂಭ



**ಬೆಂಗಳೂರು :** ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿಯಲ್ಲಿ ಉಪಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ವಿಶ್ವನಾಥ ಬಿ. ಕುಲಕರ್ಣಿಯವರು ಸುಮಾರು 33 ವರ್ಷಗಳ ಸುದೀರ್ಘ ಕಾಲ ಮಹಾಮಂಡಳದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ದಿನಾಂಕ : 31.05.2023 ರಂದು ವಯೋ ನಿವೃತ್ತಿ ಹೊಂದಿದರು. ಶ್ರೀಯುತರನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ನವರು ಅಭಿನಂದಿಸಿ, ಗೌರವಿಸಿದರು.

ಕಾರ್ಯಕ್ರಮದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ರುದ್ರೇಗೌಡ, ಶ್ರೀ ನಿರಂಜನ್ ಟಿ.ಎಸ್., ಶ್ರೀ ಹೆಚ್. ವಾಸುರವರುಗಳು ವಿಶ್ವನಾಥ ಬಿ. ಕುಲಕರ್ಣಿಯವರ ಸೇವೆಯನ್ನು ಶ್ಲಾಘಿಸಿ, ಇವರ ವಿಶ್ರಾಂತ ಜೀವನ ಸುಖಕರವಾಗಿರಲೆಂದು ಹಾರೈಸಿದರು. ಈ ಸಂದರ್ಭದಲ್ಲಿ ನಿವೃತ್ತ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್. ನಾಗರಾಜಯ್ಯ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಮಹಾಮಂಡಳದ ಅಧಿಕಾರಿ / ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಾಲಗಾರರಿಗೆ ಶೀಘ್ರದಲ್ಲೇ ಬಡ್ಡಿ ದರ ಇಳಿಕೆಯ ಬಿಗ್ ರಿಲೀಫ್?



**ಮುಂಬಯಿ :** ಸಾಲಗಾರರಿಗೆ 2023–24ರಲ್ಲಿ ಸಾಲದ ಬಡ್ಡಿ ದರ ಇಳಿಕೆಯ ಸಾಧ್ಯತೆ ಇದೆ. ಆರ್‌ಬಿಐ ನಿರೀಕ್ಷೆಯಂತೆ ಪ್ರಸಕ್ತ ಸಾಲಿನ ಎರಡನೇ ತ್ರೈಮಾಸಿಕದಲ್ಲಿ ರೆಪೊ ದರವನ್ನು 6.5%ರ ಯಥಾಸ್ಥಿತಿಯಲ್ಲಿ ಇರಿಸಿದೆ. ಹೀಗಾಗಿ ಶೀಘ್ರದಲ್ಲಿಯೇ ಸಾಲಗಳ ಬಡ್ಡಿ ದರಗಳು ಇಳಿಕೆಯಾಗುವ ಸಾಧ್ಯತೆ ಉಂಟಾಗಿದೆ. ಮುಖ್ಯವಾಗಿ ರೆಪೊ ದರವನ್ನು ಆಧರಿಸಿದ ಗೃಹ ಸಾಲಗಳ ಬಡ್ಡಿಯಲ್ಲಿ ಇಳಿಕೆ ನಿರೀಕ್ಷಿಸಲಾಗಿದೆ.

ಒಬ್ಬ ಗೃಹಸಾಲಗಾರ 20 ವರ್ಷ ಅವಧಿಗೆ 40 ಲಕ್ಷ ರೂ. ಸಾಲ ತೆಗೆದುಕೊಂಡಿದ್ದಾನೆ. ಸಾಲದ ಬಡ್ಡಿ ದರ 7% ಆಗಿತ್ತು ಹಾಗೂ ಅದರಲ್ಲಿ 2.5% ಏರಿಕೆ ಆಗಿದೆ ಎಂದಿಟ್ಟುಕೊಳ್ಳಿ. ಆಗ ಒಟ್ಟು ಬಡ್ಡಿ ದರ ಪಾವತಿಯು 34.43 ಲಕ್ಷ ರೂ.ಗಳಿಂದ 49.48 ಲಕ್ಷ ರೂ.ಗೆ ಏರಿಕೆಯಾಗುತ್ತದೆ. ಕಡಿಮೆ ಅವಧಿಯಲ್ಲಿ 44% ಹೆಚ್ಚಳವಾದಂತಾಗುತ್ತದೆ. ಸಾಲದ ಮರು ಪಾವತಿಯ ಅವಧಿಯಲ್ಲಿ 10 ವರ್ಷ ಏರಿಸಿದರೂ, 20ರಿಂದ 30 ವರ್ಷಕ್ಕೆ ವೃದ್ಧಿಸಿದರೂ, ಇಎಂಐನಲ್ಲಿ 2,622 ರೂ. ಏರಿಕೆಯಾಗುತ್ತದೆ. ಅಂದರೆ 31,012 ರೂ.ಗಳಿಂದ 33,634 ರೂ.ಗೆ ವೃದ್ಧಿಸುತ್ತದೆ. ಇದರ ಪರಿಣಾಮ ಒಟ್ಟು ಬಡ್ಡಿ ಮೊತ್ತ 34.42 ಲಕ್ಷ ರೂ.ಗಳಿಂದ 81.08 ಲಕ್ಷ ರೂ.ಗೆ ಏರುತ್ತದೆ. ಹೀಗಾಗಿ ಇಎಂಐ ಮತ್ತು ಅವಧಿ ಎರಡನ್ನೂ ಹೆಚ್ಚಿಸಿದರೆ ಕೊಡಬೇಕಿರುವ ಬಾಕಿ ಮೊತ್ತದಲ್ಲಿ 136% ಏರಿಕೆಯಾದಂತಾಗುತ್ತದೆ. ಹೀಗಾಗಿ ಸಾಲಗಾರರು ಸಾಲದ ಅವಧಿಯನ್ನು ಏರಿಸುವುದಕ್ಕಿಂತ ಇಎಂಐನಲ್ಲಿ ಹೆಚ್ಚಳ ಮಾಡುವುದು ಸೂಕ್ತ ಎನ್ನುತ್ತಾರೆ ಹಣಕಾಸು ಸಲಹೆಗಾರರು.

**ಬಡ್ಡಿ ದರಗಳು ಯಾವಾಗ ಇಳಿಕೆಯಾಗಲಿದೆ? :** ಚಿಲ್ಲರೆ ಹಣ ದುಬ್ಬರವನ್ನು 2–6% ರ ಶ್ರೇಣಿಯಲ್ಲಿ ಉಳಿಸಿಕೊಳ್ಳುವ ಪ್ರಮುಖ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಪೂರೈಕೆಯ ಸರಣಿಯಲ್ಲಿ ಅಡಚಣೆ ಉಂಟಾಗಿದ್ದರಿಂದ ಹಣದುಬ್ಬರ ಏರಿತ್ತು. ಇದನ್ನು ಹತೋಟಿಗೆ ತರಲು ಆರ್‌ಬಿಐ ಬಡ್ಡಿ ದರವನ್ನು ಏರಿಸಿತ್ತು. ಇದೀಗ ಚಿಲ್ಲರೆ ಹಣ ದುಬ್ಬರ ತಗ್ಗಿರುವುದರಿಂದ ಬಡ್ಡಿ ದರ ಇಳಿಕೆಗೆ ಹಾದಿ ಸುಗಮವಾಗುತ್ತಿದೆ. ಆರ್.ಬಿ.ಐ. ಅಂದಾಜಿನ ಪ್ರಕಾರ 2023–24ರಲ್ಲಿ ಚಿಲ್ಲರೆ ಹಣದುಬ್ಬರ ಸರಾಸರಿ 5.1% ರಲ್ಲಿ ಇರಬಹುದು. ತಜ್ಞರ ಪ್ರಕಾರ 2023ರ ಅಂತ್ಯ ಅಥವಾ 2024ರ ಆರಂಭದಲ್ಲಿ ಬಡ್ಡಿ ದರಗಳು ಇಳಿಕೆಯಾಗಲಿವೆ. ಜಾಗತಿಕ ಮಟ್ಟದಲ್ಲಿ ಬಡ್ಡಿ ದರಗಳು ಇಳಿಕೆಯಾದರೆ, ಆರ್.ಬಿ.ಐ. ಅದನ್ನು ಅನುಸರಿಸಲಿದೆ. ಆಗ ರೆಪೊ ದರ ಕಡಿಮೆಯಾಗಿ ಬ್ಯಾಂಕುಗಳಲ್ಲೂ ಸಾಲದ ಬಡ್ಡಿ ದರ ಇಳಿಕೆಯಾಗಲಿದೆ.

# ಬ್ಯಾಂಕುಗಳಿಂದ ರೂಪೇ ಪ್ರೀಪೇಯ್ಡ್ ಫೋರೆಕ್ಸ್ ಕಾರ್ಡ್ ಶೀಘ್ರದಲ್ಲೇ ಬಿಡುಗಡೆ




**ಮುಂಬಯಿ :** ಭಾರತದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿನ ಎಟಿಎಂಗಳು, ಪಿಒಎಸ್ ಯಂತ್ರಗಳು ಮತ್ತು ಸಾಗರೋತ್ತರ ಆನ್‌ಲೈನ್ ವ್ಯಾಪಾರಿಗಳಲ್ಲಿ ಬಳಸಲು ಅನುಕೂಲವಾಗುವ ರೂಪೇ ಪ್ರೀಪೇಯ್ಡ್ ಫೋರೆಕ್ಸ್ ಕಾರ್ಡ್ ಅನ್ನು ಗ್ರಾಹಕರಿಗೆ ವಿತರಿಸಲು ಭಾರತದಲ್ಲಿನ ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅನುಮತಿ ನೀಡಿದೆ. ರುಪೇ ಡೆಬಿಟ್, ಕ್ರೆಡಿಟ್ ಮತ್ತು ಪ್ರಿಪೇಯ್ಡ್ ಕಾರ್ಡ್‌ಗಳ ಹೊರತಾಗಿ ಹೆಚ್ಚುವರಿಯಾಗಿ ವಿದೇಶಗಳಲ್ಲೂ ಬಳಸುವಂಥ ರೂಪೇ ಪ್ರೀಪೇಯ್ಡ್ ಫೋರೆಕ್ಸ್ ಕಾರ್ಡ್ ಅನ್ನು ಬಿಡುಗಡೆ ಮಾಡಲು ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕ್ ಸೂಚಿಸಿದೆ. ಈ ಕ್ರಮದಿಂದಾಗಿ ಪ್ರಪಂಚದಾದ್ಯಂತ ರೂಪೇ ಕಾರ್ಡ್‌ಗಳ ಪ್ರವೇಶ ಮತ್ತು ಸ್ವೀಕಾರವು ಹೆಚ್ಚಾಗಲಿದೆ. ಭಾರತದಲ್ಲಿ ಬ್ಯಾಂಕ್‌ಗಳು ನೀಡುವ ರೂಪೇ ಡೆಬಿಟ್ ಮತ್ತು ಕ್ರೆಡಿಟ್‌ಕಾರ್ಡ್‌ಗಳು ಅಂತರರಾಷ್ಟ್ರೀಯ ಪಾಲುದಾರರೊಂದಿಗೆ ದ್ವಿಪಕ್ಷೀಯ ಒಪ್ಪಂದಗಳು ಮತ್ತು ಅಂತಾರಾಷ್ಟ್ರೀಯ ಕಾರ್ಡ್ ಯೋಜನೆಗಳೊಂದಿಗೆ ಸಹ–ಬ್ಯಾಡ್ಜಿಂಗ್ ವ್ಯವಸ್ಥೆಗಳ ಮೂಲಕ ಅಂತರರಾಷ್ಟ್ರೀಯ ಸ್ವೀಕಾರವನ್ನು ಪಡೆದಿವೆ. ವಿದೇಶಗಳಲ್ಲಿ ಪ್ರಯಾಣಿಸುವ ಭಾರತೀಯರಿಗೆ ಪಾವತಿ ಆಯ್ಕೆಗಳನ್ನು ವಿಸ್ತರಿಸುವ ಸಲುವಾಗಿ, ರೂಪೇ ಪ್ರೀಪೇಯ್ಡ್ ಫೋರೆಕ್ಸ್ ಕಾರ್ಡ್‌ಗಳು ನೆರವಾಗಲಿವೆ, ರಿಸರ್ವ್ ಬ್ಯಾಂಕ್ ಹೇಳಿದೆ.

**ರೂಪೇ ಪ್ರೀಪೇಯ್ಡ್ ಫೋರೆಕ್ಸ್ ಕಾರ್ಡ್‌ನ ಕನಿಷ್ಠ ಮಾನ್ಯತೆ ಎಷ್ಟು? :** ಈ ರುಪೇ ಪ್ರೀಪೇಯ್ಡ್ ಫೋರೆಕ್ಸ್ ಕಾರ್ಡ್‌ಗಳು ಒಂದು ವರ್ಷದ ಕನಿಷ್ಠ ಮಾನ್ಯತೆಯ ಅವಧಿಯನ್ನು ಹೊಂದಿರುತ್ತವೆ. ಆದಾಗ್ಯೂ, ದೀರ್ಘಾವಧಿಯ ಮಾನ್ಯತೆಯೊಂದಿಗೆ ಈ ಕಾರ್ಡ್‌ಗಳನ್ನು ವಿತರಿಸಲು ಅವಕಾಶವಿದೆ.

# ಚಲಾವಣೆಯಲ್ಲಿದ್ದ ರೂ.2000 ನೋಟುಗಳಲ್ಲಿ ಅರ್ಧದಷ್ಟು ಬ್ಯಾಂಕುಗಳಿಗೆ ವಾಪಸ್

**ಹೊಸದಿಲ್ಲಿ :** ಚಲಾವಣೆಯಲ್ಲಿರುವ ರೂ.2,000 ನೋಟುಗಳ ಪೈಕಿ ಶೇ.50ರಷ್ಟು ನೋಟುಗಳು ನಿಷೇಧ ಘೋಷಿಸಿದ 20 ದಿನಗಳ ಒಳಗೆ ಬ್ಯಾಂಕುಗಳಿಗೆ ವಾಪಸ್ ಬಂದಿವೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ವಾಪಸ್ ಬಂದಿರುವ ನೋಟುಗಳ ಮೌಲ್ಯ ರೂ.1.8 ಲಕ್ಷ ಕೋಟಿ ಎಂದು ಕೇಂದ್ರೀಯ ಬ್ಯಾಂಕ್ ತಿಳಿಸಿದೆ.

ಶೇ. 85ರಷ್ಟು ನೋಟುಗಳು ಬ್ಯಾಂಕ್ ಠೇವಣಿಗಳಾಗಿ ವಾಪಸ್ ಬಂದಿವೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ನಾವು ಅಂಕಿ–ಅಂಶಗಳನ್ನು ಒಟ್ಟು ಮಾಡುತ್ತಿದ್ದೇವೆ. ಆದರೆ, ಪ್ರಾಥಮಿಕ ಅಂದಾಜಿನ ಪ್ರಕಾರ ಸುಮಾರು ಶೇ. 85ರಷ್ಟು 2,000 ರೂಪಾಯಿ ನೋಟುಗಳು ಬ್ಯಾಂಕ್ ಖಾತೆಗಳಿಗೆ ಠೇವಣಿಯಾಗಿ ಹಿಂತಿರುಗಿವೆ ಎಂದು ನಾನು ಹೇಳಬಲ್ಲೆ, ಎಂದು ಶಕ್ತಿಕಾಂತ್‌ದಾಸ್ ಹೇಳಿದ್ದಾರೆ. ಮಾರ್ಚ್ 31ರ ಹೊತ್ತಿಗೆ 3.62 ಲಕ್ಷ ಕೋಟಿ ರೂ. ಮೌಲ್ಯದ 2,000 ರೂಪಾಯಿ ನೋಟುಗಳು ಚಲಾವಣೆಯಲ್ಲಿದ್ದವು.

2,000 ರೂಪಾಯಿ ಮುಖಬೆಲೆಯ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಸೆಪ್ಟೆಂಬರ್ 30ರವರೆಗೆ ಅವಕಾಶ ಕಲ್ಪಿಸಲಾಗಿದ್ದು, ಬ್ಯಾಂಕ್ ಖಾತೆಗೆ ಠೇವಣಿ ಅಥವಾ ನೇರವಾಗಿ ವಿನಿಮಯ ಮಾಡಿಕೊಳ್ಳಬಹುದು. ಜನರು ಸೆಪ್ಟೆಂಬರ್‌ನ ಕೊನೆಯ 10–15 ದಿನಗಳವರೆಗೆ ಕಾಯದೇ ತಕ್ಷಣವೇ ನೋಟುಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಈ ಮೂಲಕ ಕೊನೆಯ ಕ್ಷಣದ ಒತ್ತಡಕ್ಕೆ ಸಿಲುಕದಂತೆ ಮನವಿ ಮಾಡಿದ್ದಾರೆ. ನೋಟು ವಿನಿಮಯಕ್ಕಾಗಿ ಕೇಂದ್ರೀಯ ಬ್ಯಾಂಕ್‌ನಲ್ಲಿ ಸಾಕಷ್ಟು ಕರೆನ್ಸಿ ಲಭ್ಯವಿದೆ ಎಂದು ಅವರು ಇದೇ ವೇಳೆ ತಿಳಿಸಿದ್ದಾರೆ.

# ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂಧಿಸಿದ ಎಲ್ಲಾ ನೀತಿ ಸಮಸ್ಯೆಗಳಿಗೆ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ರಿಜರ್ವ್ ಬ್ಯಾಂಕ್‌ನಿಂದ ನೇಮಕ

ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಅವರು ಮೇ 12, 2023 ರಂದು ರಾಷ್ಟ್ರಿಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಕೆಲವು ರಾಜ್ಯದ ಪಟ್ಟಣ ಬ್ಯಾಂಕುಗಳ ಮಹಾಮಂಡಳಗಳು ಮತ್ತು ಆಯ್ದ ಪಟ್ಟಣ ಸಹಕಾರ ಬ್ಯಾಂಕಗಳ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಸಭೆ ನಡೆಸಿದ್ದರು. ಸಭೆಯಲ್ಲಿ ಸೂಚಿಸಿದಂತೆ ಮತ್ತು ಪಟ್ಟಣ ಬ್ಯಾಂಕುಗಳ ವಲಯಕ್ಕೆ ಸಂಬಂಧಿಸಿದ ನೀತಿ/ನಿಯಂತ್ರಣ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಒಕ್ಕೂಟಗಳೊಂದಿಗೆ ನಿಕಟ ಸಮನ್ವಯ ಮತ್ತು ಕೇಂದ್ರೀಕೃತ ಸಂವಾದವನ್ನು ತರುವ ಉದ್ದೇಶದಿಂದ, ನಿಯಂತ್ರಣ ಇಲಾಖೆಯ ಮುಖ್ಯ ಪ್ರಧಾನ ವ್ಯವಸ್ಥಾಪಕರನ್ನು ನೋಡಲ್ ಅಧಿಕಾರಿ ಆಗಿ ನೇಮಿಸಲು ನಿರ್ಧರಿಸಲಾಗಿದೆ. ವಲಯ ಮಟ್ಟದ ವಿಷಯಗಳಲ್ಲಿ ಪಟ್ಟಣ ಬ್ಯಾಂಕುಗಳು ಮತ್ತು ಇತರ ಸಂಬಂಧಿತ ಘಟಕಗಳೊಂದಿಗೆ ಸಂವಾದ ಮಾಡಲು ನೋಡಲ್‌ಅಧಿಕಾರಿಯ ಸಂಪರ್ಕ ವಿವರಗಳು ಕೆಳಕಂಡಂತಿವೆ.

| | |
|---|---|
| ಹೆಸರು ಮತ್ತು ಹುದ್ದೆ | **ಶ್ರೀಮತಿ. ಸಿಂಟಾ ಜಾಯ್,** ಮುಖ್ಯ ಜನರಲ್ ಮ್ಯಾನೇಜರ್ |
| ಇಲಾಖೆ | ನಿಯಂತ್ರಣ ಇಲಾಖೆ |
| ವಿಳಾಸ | ಭಾರತಿಯ ರಿಜರ್ವ್ ಬ್ಯಾಂಕ್, ಕೇಂದ್ರ ಕಛೇರಿ, ಪೋರ್ಟ್, ಮುಂಬಯಿ–400001 |
| ದೂರವಾಣಿ ಸಂಖ್ಯೆ | 022–22701205 |
| ಇಮೇಲ್–ವಿಳಾಸ | cgmucbsdor@rbi.org.in |

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಒಬ್ಬ ಸದಸ್ಯರು ಬ್ಯಾಂಕಿನಲ್ಲಿ ಉತ್ತಮ ವ್ಯವಹಾರವನ್ನು ಇಟ್ಟುಕೊಂಡಿದ್ದಾರೆ. ಅಮೆರಿಕಾದಲ್ಲಿ ಅವರ ಮಗಳು ಉಚ್ಚ ಶಿಕ್ಷಣ ಪಡೆಯಲು ಬಯಸಿದ್ದು, ಅದಕ್ಕಾಗಿ 60ಲಕ್ಷ ರೂಪಾಯಿಗಳ ಶಿಕ್ಷಣ ಸಾಲವನ್ನು ಕೋರಿದ್ದಾರೆ. ಶಿಕ್ಷಣದ ಅವಧಿ 24 ತಿಂಗಳಿದ್ದು, ಸಾಲದ ಕಂತು ಶಿಕ್ಷಣ ಮುಗಿದ 6 ತಿಂಗಳಿನ ನಂತರ ಪ್ರಾರಂಭವಾಗುವಂತೆ ಇಡಲು ಕೇಳಿಕೊಂಡಿದ್ದಾರೆ. ಈ ಅವಧಿಯಲ್ಲಿ ಅಂದರೆ, ಸಾಲ ಬಿಡುಗಡೆ ಮಾಡಿದ 30 ತಿಂಗಳವರೆಗೆ ಸಾಲದ ಅಸಲು ಮತ್ತು ಬಡ್ಡಿ ಪಾವತಿಗೆ ಮೊರಟೋರಿಯಂ ಇರುತ್ತದೆ. ಈ ರೀತಿ ಅಸಲಿಗೆ ಮತ್ತು ಬಡ್ಡಿ ಪಾವತಿಗೆ ಮೊರಟೋರಿಯಂ ನೀಡಬಹುದೇ?**

**ಪಟ್ಟಣ ಸಹಕಾರ ಬ್ಯಾಂಕ್ ಲಿ., ಧಾರವಾಡ.**

**ಉತ್ತರ :** ಕೋರ್ಸ್ ಮುಗಿದ ಒಂದು ವರ್ಷದ ನಂತರ ಶಿಕ್ಷಣ ಸಾಲದ ಮರುಪಾವತಿ ಪ್ರಾರಂಭಿಸಬಹುದು. ಅಲ್ಲಿಯವರೆಗೆ ಸಾಲ ಮರುಪಾವತಿ (ಬಡ್ಡಿ ಸೇರಿದಂತೆ)ಗೆ ಮೊರಟೋರಿಯಂ ನೀಡಬಹುದು. ವಿದ್ಯಾರ್ಥಿಯು ತನ್ನ ಕೋರ್ಸ್ ಮುಗಿದ ನಂತರ ಪ್ರಾರಂಭಿಕ ಉದ್ಯಮ (Startup Venture)ಕ್ಕೆ ಹೋಗಬಯಸಿದರೆ ಉದ್ಯಮದಕಾಲಾವಧಿ (Incubation Period) ವರೆಗೆ ಮೊರಟೋರಿಯಂ ಮುಂದುವರಿಯುವುದು.


# ಇ-ರೂಪಿ ವೋಚರ್‌ಗಳ ವ್ಯಾಪ್ತಿ ವಿಸ್ತರಿಸಲು ಆರ್‌ಬಿಐ ಚಿಂತನೆ : ಅಭಿವೃದ್ಧಿ ಕ್ರಮಗಳ ಪಟ್ಟಿ ಹೊರತಂದ RBI ಗವರ್ನರ್

**ಮುಂಬೈ :** ಪಾವತಿಗಳ ವ್ಯವಸ್ಥೆಯಲ್ಲಿ ಸೇವೆಗಳನ್ನು ಸುಧಾರಿಸುವ ನಿಟ್ಟಿನಲ್ಲಿ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅಭಿವೃದ್ಧಿ ಕ್ರಮಗಳ ಪಟ್ಟಿಯನ್ನು ಹೊರ ತಂದಿದ್ದಾರೆ. ಬ್ಯಾಂಕಿಂಗ್ ಅಲ್ಲದ ಪ್ರಿಪೇಯ್ಡ್ ಪಾವತಿ ಸಾಧನದ ಅವಕಾಶವನ್ನು ವಿತರಕರಿಗೆ ನೀಡುವ ಮೂಲಕ ಮತ್ತು ವ್ಯಕ್ತಿಗಳ ಪರವಾಗಿ ಇ-ರೂಪಿ ವೋರ್ಚ್‌ಗಳನ್ನು ನೀಡುವುದನ್ನು ಸಕ್ರಿಯಗೊಳಿಸುವ ಮೂಲಕ ಇ-ರೂಪಿ ವೋರ್ಚ್‌ಗಳ ವ್ಯಾಪ್ತಿಯನ್ನು ವಿಸ್ತರಿಸಲು ಆರ್‌ಬಿಐ ಚಿಂತನೆ ನಡೆಸಿದೆ.

ಪ್ರಿಪೇಯ್ಡ್ ಪೇಮೆಂಟ್ ಇನ್ಸ್ಟ್ರುಮೆಂಟ್ (ಪಿಪಿಐ) ವಿತರಕರನ್ನು ಎಂಪನೆಲ್ ಮಾಡುವ ಮೂಲಕ ಮತ್ತು ಇ-ರೂಪಿ ವೋಚರ್ಗಳನ್ನು ಸಂಗ್ರಹಿಸಲು ವ್ಯಕ್ತಿಗಳಿಗೆ ಅಧಿಕಾರ ನೀಡುವ ಮೂಲಕ ಇ-ರೂಪಿನ ವ್ಯಾಪ್ತಿ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಲು ಸೆಂಟ್ರಲ್ ಬ್ಯಾಂಕ್ ಪ್ರಸ್ತಾಪಿಸಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಘೋಷಿಸಿದ್ದಾರೆ.

ಬಳಕೆದಾರರಿಗೆ ಮತ್ತು ಫಲಾನುಭವಿಗಳಿಗೆ ಸಮಾನವಾಗಿ ಪ್ರಯೋಜನಗಳು ದೊರೆಯುವಂತಾಗಬೇಕು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಇ-ರೂಪಿ ವೋಚರ್‌ಗಳನ್ನು ಬಳಸಲು ಅನುಕೂಲವಾಗುವಂತೆ ವೋಚರ್‌ಗಳ ಮರುಲೋಡ್, ದೃಢೀಕರಣ ಪ್ರಕ್ರಿಯೆ, ವಿತರಣಾ ಮಿತಿಗಳು ಇತ್ಯಾದಿಗಳಂತಹ ಇತರ ಅಂಶಗಳನ್ನು ಸಹ ಮಾರ್ಪಡಿಸಲಾಗುವುದು. ಪ್ರತ್ಯೇಕ ಸೂಚನೆಗಳನ್ನು ಶೀಘ್ರದಲ್ಲೇ ನೀಡಲಾಗುವುದು ಎಂದು ಆರ್‌ಬಿಐ ಗವರ್ನರ್ ಹೇಳಿದ್ದಾರೆ. ದ್ವೈ-ಮಾಸಿಕ ವಿತ್ತೀಯ ನೀತಿ ಪ್ರಕಟಣೆಯ ಸಮಯದಲ್ಲಿ ಗವರ್ನರ್ ಮಾಡಿದ ಪ್ರಕಟಣೆಗಳ ಭಾಗವಾಗಿ ಮೂರು ಪಾವತಿಗಳು-ವ್ಯವಸ್ಥೆಗೆ ಸಂಬಂಧಿಸಿದ ಹೆಚ್ಚುವರಿ ಕ್ರಮಗಳು ಇವಾಗಿವೆ.

**ಏನಿದು ಇ-ರೂಪಿ? :** ಡಿಜಿಟಲ್ ವೋಚರ್ ಇ-RUPI ಅನ್ನು ಆಗಸ್ಟ್ 2021 ರಲ್ಲಿ ಪ್ರಾರಂಭಿಸಲಾಯಿತು. ಇದು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದ ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್ ಸಿಸ್ಟಂನಲ್ಲಿ ಕೆಲಸ ಮಾಡುತ್ತದೆ. NPCI (National Payments Corporation of India) ಹಣಕಾಸು ಸೇವೆಗಳ ಇಲಾಖೆ (DFS), ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ (NHA), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (MoHFW), ಮತ್ತು ಪಾಲುದಾರ ಬ್ಯಾಂಕುಗಳ ಸಹಯೋಗದೊಂದಿಗೆ ಆರಂಭಿಸಲಾಗಿದೆ.



ಪ್ರಸ್ತುತ, ನಿರ್ದಿಷ್ಟ ಉದ್ದೇಶದ ವೋರ್ಚ್‌ರ್‌ಗಳನ್ನು ಬ್ಯಾಂಕುಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪರವಾಗಿ ಮತ್ತು ಕಾರ್ಪೊರೇಟ್‌ಗಳ ಪರವಾಗಿ ಸೀಮಿತ ಪ್ರಮಾಣದಲ್ಲಿ ನೀಡುತ್ತವೆ. ಇ-ರೂಪಿಯ ಬಳಕೆದಾರರು ಇ-ರೂಪಿ ಅನ್ನು ಸ್ವೀಕರಿಸುವ ವ್ಯಾಪಾರಿಗಳಲ್ಲಿ ಕಾರ್ಡ್, ಡಿಜಿಟಲ್ ಪಾವತಿ ಅಪ್ಲಿಕೇಶನ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್ ಇಲ್ಲದೆಯೇ ವೋಚರ್ ಅನ್ನು ರಿಡೀಮ್ ಮಾಡಲು ಸಾಧ್ಯವಾಗುತ್ತದೆ.

ಡಿಜಿಟಲ್ ವೋಚರ್ ಅನ್ನು ಎಸ್‌ಎಂಎಸ್ ಅಥವಾ ಕ್ಯೂಆರ್ ಕೋಡ್ ಮೂಲಕ ಸಂಸ್ಥೆಗಳು ಅಥವಾ ಸರ್ಕಾರವು ನಿರ್ದಿಷ್ಟ ಉದ್ದೇಶ ಅಥವಾ ಚಟುವಟಿಕೆಗಾಗಿ ಫಲಾನುಭವಿಗಳೊಂದಿಗೆ ಹಂಚಿಕೊಳ್ಳಬಹುದು. ಇದು ಸಂಪರ್ಕ ರಹಿತ ಒಂದು ಬಾರಿ ಪಾವತಿ ಕಾರ್ಯ ವಿಧಾನವಾಗಿದ್ದು, ಇದು ಸುಲಭ, ಸುರಕ್ಷಿತ ಮತ್ತು ಸುರಕ್ಷಿತ ಪಾವತಿ ವಿಧಾನ ಎಂದು NPCI ಹೇಳಿಕೊಳ್ಳುತ್ತದೆ.

ಈ ಪ್ರಕ್ರಿಯೆಯಲ್ಲಿ ಫಲಾನುಭವಿಗಳ ವಿವರ ಸಂಪೂರ್ಣ ಗೌಪ್ಯವಾಗಿರುತ್ತದೆ. ಸಂಪೂರ್ಣ ವಹಿವಾಟು ಪ್ರಕ್ರಿಯೆಯು ಫಲಾನುಭವಿಗೆ ನೀಡಿರುವ ಡಿಜಿಟಲ್ ವೋಚರ್ ಅನ್ನು ಮಾತ್ರ ಬಳಕೆ ಮಾಡಿಕೊಳ್ಳುತ್ತದೆ. ಮತ್ತು ಈ ಪ್ರಕ್ರಿಯೆ ತುಲನಾತ್ಮಕವಾಗಿ ವೇಗವಾಗಿರುತ್ತದೆ. ಅದೇ ಸಮಯದಲ್ಲಿ ವಿಶ್ವಾಸಾರ್ಹವಾಗಿಯೂ ಇರುತ್ತದೆ. ಇದು ಪ್ರಿಪೇಯ್ಡ್ ಆಗಿರುವುದರಿಂದ, ಅಗತ್ಯ ಇರುವ ಮೊತ್ತವನ್ನು ಈಗಾಗಲೇ ವೋಚರ್ನಲ್ಲಿ ಸಂಗ್ರಹಿಸಲಾಗಿರುತ್ತದೆ.



# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬಿಪೊರ್ ಜೋಯ್ ಚಂಡಮಾರುತ ಮುಂದಿನ 24 ದಿನಗಳಲ್ಲಿ ಮತ್ತಷ್ಟು ತೀವ್ರಗೊಳ್ಳಲ್ಲಿದ್ದು, ಉತ್ತರ – ಈಶಾನ್ಯಕ್ಕೆ ಚಲಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಪ್ರಸ್ತುತ ನೈಋತ್ಯಕ್ಕೆ 640 ಕಿಮೀ ದೂರದಲ್ಲಿ ನೆಲೆಸಿರುವ ಚಂಡಮಾರುತವು ಗಂಟೆಗೆ 145 ಕಿಲೋಮೀಟರ್ ವೇಗದಲ್ಲಿ ಚಲಿಸುತ್ತಿದೆ.
- ಕಳೆದ ಕಾರ ಹುಣ್ಣಿಮೆ ವೇಳೆ ಗದಗಿನಲ್ಲಿ ಹಾರಿಸಿದ ಗಾಳಿಪಟದ ಮಾಂಜಾ ದಾರವು ರವಿ ಎನ್ನುವ ಸವಾರನ ಕುತ್ತಿಗೆ ಸೀಳಿತ್ತು, ಕೂಡಲೆ ಗದಗಿನ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಐದು ದಿನಗಳಿಂದ ಸಾವು ಬದುಕಿನೊಂದಿಗೆ ಹೋರಾಟದ ನಂತರ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾನೆ.
- ಕೊಡಗಿನ ಶನಿವಾರ ಸಂತೆಯ ತಲೂರು ಗ್ರಾಮದವರಾದ ರವಿ ಟಿಎಸ್ ಅವರು ಸೇನೆಯಲ್ಲಿ ಲೆಫ್ಟಿನೆಂಟ್ ಹುದ್ದೆಯಲ್ಲಿದ್ದರೆ, ಅವರ ತಾಯಿ ಸ್ಥಳಿಯ ಎಸ್ಟೇಟ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ಈಗ ಇಬ್ಬರೂ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್ಶಿಪ್ಸ್ ನಲ್ಲಿ ಭಾಗಿಯಾಗಲು ಶೀಘ್ರವೇ ಜಪಾನ್‌ಗೆ ತೆರಳುತ್ತಿದ್ದಾರೆ.
- ತಮಿಳುನಾಡು ರಾಜಧಾನಿ ಚೆನ್ನೈನ ಡಾ. ಲೋಕೇಶ್ವರನ್ ಮತ್ತು ಡಾ. ವಿಬುಷ್ನಿಯಾ ನವವಿವಾಹಿತ ಜೋಡಿ ಹನಿಮೂನ್ ಪ್ರವಾಸಕ್ಕಾಗಿ ಇಂಡೋನೇಷ್ಯಾದ ಬಾಲಿ ದ್ವೀಪಕ್ಕೆ ತೆರಳಿದ್ದರು. ಅಲ್ಲಿ ಫೋಟೋಗೆ ಪೋಸ್ ಕೊಡುವಾಗ ಆಯ ತಪ್ಪಿ ನೀರುಪಾಲಾಗಿದ್ದಾರೆ.
- ರಷ್ಯಾದ ಪ್ರವಾಸಿ ವ್ಲಾಡಿಮಿರ್ ಪೊಪೊವ್ ಈಜಿಪ್ಟ್‌ನ ಕೆಂಪು ಸಮುದ್ರದಲ್ಲಿ ಈಜಲು ಇಳಿದಾಗ ಕೂಡಲೇ ನುಗ್ಗಿ ಬಂದ ಟೈಗರ ಶಾರ್ಕ್ ಯುವಕನನ್ನು ಕಚ್ಚಿ ಎಳೆದೊಯ್ದು ತಿಂದ ಘಟನೆ ಎಲ್ಲರ ಕಣ್ಣೆದುರೇ ನಡೆದಿದೆ.
- ಕೊಲಂಬಿಯಾದಲ್ಲಿ ವಿಮಾನ ಪತನವಾಗಿ 40 ದಿನಗಳ ಬಳಿಕ ಅಮೆಜಾನ್ ದಟ್ಟಾರಣ್ಯದಲ್ಲಿ ಒಂದು ಮಗು ಸೇರಿದಂತೆ 4 ಮಕ್ಕಳನ್ನು ಜೀವಂತವಾಗಿ ರಕ್ಷಣೆ ಮಾಡಲಾಗಿದೆ ಎಂದು ಅಲ್ಲಿನ ಸೇನಾಪಡೆ ತಿಳಿಸಿದೆ.
- ವಿಜಯಪುರದ 81 ವರ್ಷದ ನಿಂಗಯ್ಯ ಒಡೆಯರ್ ಅವರು ಪತ್ನಿಯಿಂದ ಪ್ರೇರಣೆಗೊಂಡು ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಎಂ.ಎ. ಇಂಗ್ಲಿಷ್ ಅಂತಿಮ ವರ್ಷದ ಪರೀಕ್ಷೆ ಬರೆಯುವ ಮೂಲಕ ಗಮನ ಸೆಳೆದಿದ್ದಾರೆ.

# ಓದುಗರ ಅನಿಸಿಕೆ...


ವಾರ್ತಾ ಪತ್ರಿಕೆ
ಸಿಬಿಲ್ ಸ್ಕೋರ್ ಆಧಾರದಲ್ಲಿ ಶಿಕ್ಷಣ ಸಾಲ ನಿರಾಕರಿಸುವಂತಿಲ್ಲ : ಹೈಕೋರ್ಟ್

**ವಿದ್ಯಾರ್ಥಿಯ ಭವಿಷ್ಯವನ್ನು ಪರಿಗಣಿಸಬೇಕು :** ದೇಶದ ಭವಿಷ್ಯದ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾಲು ಅತೀ ಮುಖ್ಯವಾಗಿರುತ್ತದೆ. ಸಿಬಿಲ್ ಸ್ಕೋರ್ ಕಡಿಮೆಯಾಗಿದೆ ಎಂದು ಶಿಕ್ಷಣ ಸಾಲವನ್ನು ನಿರಾಕರಿಸುವುದು ಸರಿಯಲ್ಲ ಎಂದು ಕೇರಳ ಹೈಕೋರ್ಟ್‌ನ ನ್ಯಾಯಮೂರ್ತಿ ಪಿವಿ ಕುನ್ನಿಕೃಷ್ಣನ್ ಹೇಳಿದ್ದಾರೆ. ಗೃಹ, ಕಾರು ಮೊದಲಾದ ಸಾಲಗಳನ್ನು ನೀಡುವಾಗ ಸಿಬಿಲ್ ಸ್ಕೋರ್ ನೋಡಲಿ ಆದರೆ, ಶಿಕ್ಷಣ ಸಾಲ ನೀಡುವಾಗ ಬ್ಯಾಂಕುಗಳು ವಿದ್ಯಾರ್ಥಿಯ ಭವಿಷ್ಯವನ್ನು ಪರಿಗಣಿಸಬೇಕು. ▸▸ **ವಿ. ಚಂದ್ರಕಾಂತ ಪಾಟೀಲ್, ಧಾರವಾಡ**

**ಜಿಡಿಪಿ ನಿರೀಕ್ಷೆ ಮುಟ್ಟದಿರುವ ಸಾಧ್ಯತೆ :** ನಮ್ಮ ದೇಶ ಆರ್ಥಿಕವಾಗಿ ಮುನ್ನಡೆಯುತ್ತಿದೆ ಎಂದು ಆರ್‌ಬಿಐ ಹೇಳಿದೆ. ಹಣದುಬ್ಬರ ನಮ್ಮಲ್ಲಿ ಕಡಿಮೆಯಾಗಿದೆ ಎಂದು ಶೇ.6.5ರ ಜಿಡಿಪಿ ಬೆಳವಣಿಗೆಯನ್ನು ಅಂದಾಜು ಮಾಡಲಾಗಿದೆ. ಆದರೆ, ಈ ವರ್ಷ ದೇಶದಲ್ಲಿ ಮುಂಗಾರು ಸಾಮಾನ್ಯವಾಗಿರಲಿದೆ ಎನ್ನುವ ಹವಾಮಾನ ತಜ್ಞರ ಅಭಿಪ್ರಾಯದ ಹಿನ್ನೆಲೆಯಲ್ಲಿ ಜಿಡಿಪಿ ನಿರೀಕ್ಷೆ ಮುಟ್ಟದಿರುವ ಸಾಧ್ಯತೆಯೂ ಇದೆಯಲ್ಲವೇ...?
▸▸ **ಎಲ್. ರೇಣುಕಾಪ್ರಸಾದ್, ತುಮಕೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.